# ಅರವಿಂದ್ ಲೈಫ್‌ಸ್ಟೈಲ್ ಬ್ರಾಂಡ್ ಲಿ, ರಾಮನಗರ, ಈ ಕಾರ್ಖಾನೆಯ ಕಾರ್ಮಿಕರ ಗಮನಕ್ಕೆ,

ಆತ್ಮೀಯ ಕಾರ್ಮಿಕರೇ,

ಅರವಿಂದ್ ಲೈಫ್‌ಸ್ಟೈಲ್ ಬ್ರಾಂಡ್ ಲಿ.ನಲ್ಲಿ ಕೆಲಸ ಮಾಡುತ್ತಿರುವ ನಮಗೆಲ್ಲರಿಗೂ ನಮ್ಮ ಕಾರ್ಖಾನೆಯಲ್ಲಿ ಆಗಿರುವ ಬದಲಾವಣೆಗಳು ತಿಳಿದಿವೆ. ನಾವೆಲ್ಲರೂ ಒಗ್ಗಟ್ಟಾಗಿ, GATWU ಮುಖಂಡತ್ವದಲ್ಲಿ ನಮ್ಮ ಮೇಲಾಗುತ್ತಿದ್ದ ಅನ್ಯಾಯದ ವಿರುದ್ಧ ಹೋರಾಟ ಮಾಡಿದ ಫಲವೇ ಈ ಬದಲಾವಣೆ. ಕಾರ್ಖಾನೆಯಲ್ಲಿ ತಾವೆಲ್ಲರೂ ಯೂನಿಯನ್‌ಗೆ ಸೇರುವ ಮುನ್ನ ಇದ್ದ ಪರಿಸ್ಥಿತಿಗೂ, ಈಗ ಇರುವ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಆ ವ್ಯತ್ಯಾಸಗಳೇನು?

| *2011 ರವರೆಗೆ ಕಾರ್ಮಿಕರು ಒಗ್ಗಟಾಗದೇ ಇದ್ದ ಸಂದರ್ಭದಲ್ಲಿ . . . . . ಆಡಳಿತವರ್ಗದವರು . .* | *2011 ಫೆಬ್ರವರಿಯಲ್ಲಿ GATWUಗೆ ಸದಸ್ಯರಾಗುವ ಮೂಲಕ ಕಾರ್ಮಿಕರೆಲ್ಲರೂ ಒಗ್ಗಟ್ಟಾದಾಗ. ...... . ಆಡಳಿತವರ್ಗದವರು,* |
|---|---|
| ಕಾನೂನು ಬದ್ಧವಾಗಿ ಕೊಡಬೇಕಾಗಿದ್ದ 2007–08 ಮತ್ತು 2008–09 ರ ಸಾಲಿನ ಬೋನಸ್ ಕೊಡದೆ ವಂಚಿಸಿದ್ದರು. | ಬಾಕಿ ಇದ್ದ ಬೋನಸ್ ಕೊಟ್ಟರು. |
| ಕಾರ್ಮಿಕರಿಂದ ಬಲವಂತವಾಗಿ ರಾತ್ರಿ 2 ಗಂಟೆಯವರೆಗೂ ಕೆಲಸ ಮಾಡಿಸುತ್ತಿದ್ದರು. | ಕಾರ್ಮಿಕರ ಇಚ್ಛೆಯ ಮೇರೆಗೆ ಅವರಿಗೆ ಓ.ಟಿ ಮಾಡಲು ಅವಕಾಶ |
| ಓ.ಟಿ ಮಾಡುವಾಗ ಕೊಡುತ್ತಿದ್ದ ಕಾಫಿ / ಊಟದ ಹಣವನ್ನು ಕಾರ್ಮಿಕರ ವೇತನದಲ್ಲಿಯೇ ಕಡಿತಗೊಳಿಸುತ್ತಿದ್ದರು. | ಓ.ಟಿ ಸಮಯದಲ್ಲಿ ಉಚಿತ ಕಾಫಿ ಮತ್ತು ತಿಂಡಿ ಒದಗಿಸುತ್ತಿದ್ದಾರೆ. |
| ಕಾರ್ಮಿಕರನ್ನು ಬಾಯಿಗೆ ಬಂದಂತೆ ಬೈಯುತ್ತಿದ್ದರು. | ಕಾರ್ಮಿಕರನ್ನು ಬಾಯಿಗೆ ಬಂದಂತೆ ಬೈಯುವುದು ಕಡಿಮೆಯಾಗಿದೆ. |
| ಮಹಿಳಾ ಕಾರ್ಮಿಕರನ್ನು ರಾತ್ರಿ 8 ಗಂಟೆಯವರೆಗೂ ಕೆಲಸ ಮಾಡಿಸುತ್ತಿದ್ದರು. | ಮಹಿಳಾ ಕಾರ್ಮಿಕರಿಗೆ ರಾತ್ರಿ 7 ರ ವರೆಗೆ ಮಾತ್ರ ಕೆಲಸ ಅದೂ ಅವರು ಇಷ್ಟ ಪಟ್ಟಲ್ಲಿ ಮಾತ್ರ. |
| ಕಾರ್ಮಿಕರನ್ನು ನಿರ್ದಾಕ್ಷಿಣ್ಯವಾಗಿ, ಯಾವುದೇ ಕಾರಣವಿಲ್ಲದೆ ಕೆಲಸದಿಂದ ತೆಗೆದುಹಾಕುತ್ತಿದ್ದರು | ಕಾರ್ಮಿಕರನ್ನು ಈಗ ಇದ್ದಕ್ಕಿದ್ದಂತೆ ಕೆಲಸದಿಂದ ತೆಗೆಯುವುದು ಕಡಿಮೆಯಾಗಿದೆ. |
| ಕಾರ್ಮಿಕರಿಗೆ ಅತ್ಯಂತ ಕಡಿಮೆ ವೇತನ | 2012 ರಲ್ಲಿ ರೂ. 800 ರಿಂದ ರೂ. 1200 ವೇತನದ ಹೆಚ್ಚಳ, 2013 ರಲ್ಲಿ ಡಿ.ಎ ಸೇರಿ 800 ರೂ ವೇತನದ ಹೆಚ್ಚಳ |

ಕಾರ್ಮಿಕರೇ ನೀವೇ ಗಮನಿಸಿ, ನಾವು ಒಗ್ಗಟ್ಟಾದರೆ ಏನನ್ನೂ ಬೇಕಾದರೂ ಸಾಧಿಸಬಹುದು. ಆದರೆ ನಮ್ಮ ಒಗ್ಗಟ್ಟು, ಆಡಳಿತವರ್ಗಕ್ಕೆ ಸಹಿಸಲು ಅಸಾಧ್ಯವಾಗುತ್ತದೆ. ಆದ್ದರಿಂದಲೇ ಹೇಗಾದರೂ ನಮ್ಮನ್ನು ಒಡೆಯುವುದೇ ಅವರ ಮುಖ್ಯಗುರಿಯಾಗಿದೆ. ನಮ್ಮ ನಮ್ಮೊಳಗೇ ಭಿನ್ನಾಭಿಪ್ರಾಯ ಬರುವಂತೆ ಕುತಂತ್ರದಿಂದ ಚಿತಾವಣೆ ನಡೆಸಿ, ನಮ್ಮ ಒಗ್ಗಟ್ಟನ್ನು ಒಡೆಯುವುದರಿಂದ ಆಡಳಿತವರ್ಗಕ್ಕೆ ನೂರಾರು ಕೋಟಿ ಲಾಭವಾಗುತ್ತದೆ.

ಆದ್ದರಿಂದ ಕಾರ್ಮಿಕ ಸಂಗಾತಿಗಳೇ, ನಮ್ಮ ಒಗ್ಗಟ್ಟಿನಲ್ಲಿ ನಂಬಿಕೆ ಇಡಿ, ಆಡಳಿತವರ್ಗದ ಹುನ್ನಾರಕ್ಕೆ ಬಲಿಯಾಗಬೇಡಿ. ನಾವೆಲ್ಲರೂ ಒಟ್ಟಾಗಿ ಸೇರಿದರೆ, ನಮಗೆ ನ್ಯಾಯಯುತವಾಗಿ ಸಿಗಬೇಕಾದ ಈ ಕೆಳಗಿನ ಸೌಲಭ್ಯಗಳು ಸಿಕ್ಕೇ ಸಿಗುತ್ತವೆ.

- **ತಿಂಗಳಿಗೆ 12,000 ರೂ. ವೇತನ ಮತ್ತು ಪ್ರತಿವರ್ಷ ವೇತನ ಹೆಚ್ಚಳ,**
- **ನಮ್ಮೆಲ್ಲರನ್ನೂ ಕಂಪನಿಯ ಖಾಯಂ ಕಾರ್ಮಿಕರನ್ನಾಗಿ ನೇಮಿಸಿಕೊಳ್ಳುವುದು**
- **ಮನೆ ಬಾಡಿಗೆ ಭತ್ಯೆ , ವಾಹನ ಭತ್ಯೆ,**
- **ಪುರುಷ ಮತ್ತು ಮಹಿಳಾ ಕಾರ್ಮಿಕರಿಗೆ ಸಮವಸ್ತ್ರ, ಮತ್ತು ಶೂ/ಚಪ್ಪಲಿಗಳು**
- **ಲಾಭಾಂಶ ಆಧಾರದ ಮೇಲೆ ಕಾರ್ಮಿಕರಿಗೆ 20% ಬೋನಸ್ ಮತ್ತು ಆಯುಧ ಪೂಜೆಯ ಸಮಯದಲ್ಲಿ ಕಾರ್ಮಿಕರಿಗೆ ಉಡುಗೊರೆ**
- **ವರ್ಷಕ್ಕೊಮ್ಮೆ ಕಾರ್ಮಿಕರಿಗೆ ಉಚಿತ ಪ್ರವಾಸ ಸೌಲಭ್ಯ, ಕಾರ್ಮಿಕರ ತುರ್ತು ಪರಿಸ್ಥಿತಿಯಲ್ಲಿ ಅಡ್ವಾನ್ಸ್ ಸೌಲಭ್ಯ**
- **ಉಚಿತ ಕ್ಯಾಂಟೀನ್ ಸೌಲಭ್ಯ ಜೊತೆಗೆ ಇನ್ನೂ ಹಲವಾರು ಸೌಲಭ್ಯಗಳು**

**ಬನ್ನಿ ನ್ಯಾಯಕ್ಕಾಗಿ ಒಗ್ಗಟ್ಟಾಗಿ, GATWU ಸದಸ್ಯತ್ವ ಇಂದೇ ತೆಗೆದುಕೊಳ್ಳಿ**

***ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU):***

***ಮೊಬೈಲ್ ಸಂಖ್ಯೆ: 9980489698, 9964831623, 8971580490***

0502855548

Scanned with OKEN Scanner